ಓ.ಎಸ್. ನಂಃ **291/2013**
ಪಿ.ಡಬ್ಲ್ಯೂಃ **1**

ದಿನಾಂಕ **22-11-2025** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ವಾದಿಯ ಪರ: ಶ್ರೀ ಎಸ್ ಕೆ ವಕೀಲರಿಂದಃ

20 ಪಹಣಿ ಪತ್ರಿಕೆಗಳನ್ನು ಕ್ರಮವಾಗಿ ನಿಪಿ-5 ರಿಂದ 24 ಹಾಗೂ 03 ಹಕ್ಕು ಬದಲಾವಣೆ ಆದೇಶದ ದೃಡೀಕೃತ ಪ್ರತಿಗಳನ್ನು ನಿಪಿ-25 ರಿಂದ 27 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ **1 (ಬಿ)** ಪ್ರತಿವಾದಿಯ ಪರ ಶ್ರೀ ಜಿ ಎಂ ಎಂ ವಕೀಲರಿಂದಃ

ನಾನು 8 ನೇ ತರಗತಿ ವರೆಗೆ ಓದಿದ್ದೇನೆ. ಕಣೇಕಲ್ ಗ್ರಾಮದಲ್ಲಿ ಓದಿದ್ದೇನೆ. ಕಡೆಚೂರು ಗ್ರಾಮದ ಸಿದ್ದಮ್ಮ ಎಂಬುವವರು ನನ್ನ ತಾಯಿಯ ಅಕ್ಕ ಆಗಿರುತ್ತಾರೆ. ಸದರಿ ಸಿದ್ದಮ್ಮ ರವರು ಗಂಡನ ಹೆಸರು ಬುಡ್ಡಪ್ಪ ಎಂದು ಇರುತ್ತದೆ ಎಂದರೆ ಸರಿ. ಸದರಿ ಸಿದ್ದಮ್ಮ ತೀರಿಕೊಂಡಿದ್ದಾರೆ ಎಂದರೆ ಸರಿ. 2 ನೇ ಪ್ರತಿವಾದಿ ಭೀಮವ್ವ ರವರು ಸದರಿ ಸಿದ್ದಮ್ಮ ರವರ ತಂಗಿಯಾಗಿರುತ್ತಾರೆ. ನರಸಪ್ಪ, ತಾಯಪ್ಪ, ದೊಡ್ಡ ನರಸಮ್ಮ ಹಾಗೂ ಸಣ್ಣ ನರಸಮ್ಮ ರವರು ಸದರಿ ಸಿದ್ದಮ ರವರ ಮಕ್ಕಳಾಗಿರುತ್ತಾರೆ ಎಂದರೆ ಸರಿ. ಸದರಿ ದೊಡ್ಡ ನರಸಮ್ಮ ತೀರಿಕೊಂಡಿದ್ದು ಅವರ ಮಗಳು ಮಾಳಮ್ಮ @ ಶಂಕರಮ್ಮ ಜೀವಂತ ಇದ್ದಾರೆ ಎಂದರೆ ಸರಿ. ಸಣ್ಣ ನರಸಮ್ಮ ಸಹ ತೀರಿಕೊಂಡಿದ್ದಾಳೆ ಎಂದರೆ ಸರಿ. ಸದರಿ ಸಿದ್ದಮ್ಮ ಹಾಗೂ ಅವರ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

2. ಸದರಿ ಕಡೆಚೂರು ಗ್ರಾಮದ ಸಿದ್ದಮ್ಮ ರವರ ತಂದೆ ಯಲ್ಲಪ್ಪ ತಂದೆ ನರಸಪ್ಪ ರವರು ಮರಣಹೊಂದಿದ್ದಾರೆ ಎಂದರೆ ಸರಿ. ಸದರಿ ಸಿದ್ದಮ್ಮನ ತಾಯಿ ನರಸಮ್ಮ ಸಹ ಮರಣಹೂಂದಿದ್ದಾರೆ ಎಂದರೆ ಸರಿ. ನಿಮ್ಮ ತಾಯಿ ಮರಿಲಿಂಗಮ್ಮ ಹಾಗೂ 2 ನೇ ಪ್ರತಿವಾದಿ ಭೀಮವ್ವ ಸಹ ಸದರಿ ಯಲ್ಲಪ್ಪ ಹಾಗೂ ನರಸಮ್ಮ ರವರ ಮಕ್ಕಳಾಗಿರುತ್ತಾರೆ ಎಂದರೆ ಸರಿ. ಯಲ್ಲಪ್ಪ ತೀರಿಕೊಂಡ ದಿನಾಂಕ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯನ್ನು ಸಣ್ಣ ಸಂಬ್ರ ಗ್ರಾಮಕ್ಕೆ ಕೊಟ್ಟು ಮದುವೆ ಮಾಡಿದ್ದಾರೆ. ಮರಿಲಿಂಗಮ್ಮ ರವರನ್ನು ಕಣೆಕಲ್ ಗ್ರಾಮಕ್ಕೆ ಕೊಟ್ಟು ಮದುವೆ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರು ನನ್ನ ತಾಯಿಯಾಗಿರುತ್ತಾರೆ ಎಂದು ನುಡಿಯುತ್ತಾರೆ. ನನಗೆ ಯಾವುದೇ ಸಹೋದರ-ಸಹೋದರಿಯರು ಇರುವುದಿಲ್ಲ.

3. 1 ನೇ ಪ್ರತಿವಾದಿ ಮರಣಹೊಂದಿದ್ದಾನೆ ಎಂದರೆ ಸರಿ. ನನ್ನಗೆ ಕನ್ನಡ ಭಾಷೆ ಓದಲು-ಬರೆಯಲು ಬರುತ್ತದೆ. ವಂಕಸಬ್ರ ಗ್ರಾಮದ ಪಂಚಾಯಿ ನಂ.5-25 ಹಾಗೂ ಸರ್ವೆ ನಂ.16, 351, 355/1, 361/ಅ ಮತ್ತು ಸಂಬ್ರ ಗ್ರಾಮದ ಸರ್ವೆ ನಂ.245 ರ ಜಮೀನು 1 ನೇ ಪ್ರತಿವಾದಿಯ ಹಿರಿಯರ ಆಸ್ತಿಗಳು ಆಗಿರುತ್ತವೆ ಎಂದರೆ ಸರಿ. ಆತ ತೀರಿಕೊಂಡ ನಂತರ ಸದರಿ ಜಮೀನುಗಳನ್ನು ಆತನ ಹೆಂಡತಿ-ಮಕ್ಕಳು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ. ಈಗಲೂ ಅವರೇ ಕಬ್ಜಾದಲ್ಲಿ ಇದ್ದು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿಯ ತಂದೆ ಯಲ್ಲಪ್ಪ ತಂದೆ ಜಂಬಣ್ಣ ರವರು ಮರಣಹೊಂದಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿಯ ತಾಯಿ ಸಾಬಮ್ಮ ರವರೂ ಸಹ ಮರಣಹೊಂದಿದ್ದಾರೆ ಎಂದರೆ ಸರಿ.

4. ಈ ಹಿಂದೆ 1(ಬಿ) ಪ್ರತಿವಾದಿ ಸಿದ್ರಾಮಪ್ಪ ದಾಖಲಿಸಿದ ಪಾಲು ವಿಭಾಗದ ದಾವೆಯಲ್ಲಿ ನೀವು 10 ನೇ ಪ್ರತಿವಾದಿ ಆಗಿರುತ್ತೀರಿ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯ ನಂ.210/2014 ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿನ ಡಿಕ್ರಿಯ ದೃಡೀಕೃತ ನಕಲು ಪತಿಯನ್ನು ಸಾಕ್ಷಿಗೆ ತೋರಿಸಿ ಅದರಲ್ಲಿನ 10 ನೇ ಪ್ರತಿವಾದಿ ಮಲ್ಲರೆಡ್ಡಿ ತಂದೆ ಬನ್ನಪ್ಪ ಕುರುಬ ಎಂಬಾತ ನೀವೆ ಆಗಿರುತ್ತೀರಿ ಎಂದರೆ ಸಾಕ್ಷಿಯು ಸರಿ ಎಂದು ನುಡಿದಿದ್ದು, ಸದರಿ ದಾಖಲೆನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ದಾವೆಯಲ್ಲಿ ನೀವು ಶ್ರೀ. ಎಸ್.ಎಂ ವಕೀಲರ ಮೂಲಕ ಹಾಜರಾಗಿರುತ್ತೀರಿ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಮಾಹಿತಿ ಇದ್ದರೂ ಸಹ ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿ ದಾವೆಯ 9 ನೇ ಪ್ರತಿವಾದಿಯಾಗಿದ್ದ ಭೀಮವ್ವ ಗಂಡ ಭೀರಪ್ಪ ಕುರುಬ ರವರು ಈ ದಾವೆಯ 2 ನೇ ಪ್ರತಿವಾದಿ ಆಗಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ನಿಮಗೆ ಹಕ್ಕು ಇರುವುದಿಲ್ಲ ಎಂದು ಆದೇಶ ಆಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ನನ್ನ ವಕೀಲರಿಗೆ ಮೇಲ್ಮನವಿ ಸಲ್ಲಿಸುವಂತೆ ಹೇಳಿದ್ದೆನು ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ಹಾಗೂ ನಿಮ್ಮ ಕುಟುಂಬ ಬೇರೆ ಬೇರೆ ಆಗಿರುತ್ತದೆ ಎಂದರೆ ಸಾಕ್ಷಿಯು ನನ್ನ ತಾತ ಯಲ್ಲಪ್ಪನಿಗೆ ಇಬ್ಬರು ಹೆಂಡತಿಯರು ಇದ್ದು ಸಿದ್ದಮ್ಮ ರವರು ನನ್ನ ತಾತನ ಮೊದಲ ಹೆಂಡತಿಯ ಮಗಳಾಗಿರುತ್ತಾಳೆ ಹಾಗೂ ನನ್ನ ತಾಯಿ ಮರಿಲಿಂಗಮ್ಮ ಹಾಗೂ 2 ನೇ ಪ್ರತಿವಾದಿ ಭೀಮವ್ವ ಮತ್ತು 1 ನೇ ಪ್ರತಿವಾದಿ

ಮರಿಲಿಂಗಪ್ಪ ರವರು 2 ನೇ ಹೆಂಡತಿ ಸಾಬವ್ವನ ಮಕ್ಕಳಾಗಿರುತ್ತಾರೆ ಎಂದು ನುಡಿಯುತ್ತಾರೆ. ಸಿದ್ದಮ್ಮ ಯಲ್ಲಪ್ಪನ 1 ನೇ ಹೆಂಡತಿಯ ಮಗಳು ಹಾಗೂ ನನ್ನ ತಾಯಿ ಮತ್ತು 1 ಹಾಗೂ 2 ನೇ ಪ್ರತಿವಾದಿಯರು 2 ನೇ ಹೆಂಡತಿಯ ಮಕ್ಕಳಾಗಿರುತ್ತಾರೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ತಂದೆ ಯಲ್ಲಪ್ಪ ವಂಕಸಂಬ್ರ ಗ್ರಾಮದವಾರಾಗಿದ್ದರು ಎಂದರೆ ಸರಿ. ಸಾಕ್ಷಿಗೆ 2 ನೇ ಪ್ರತಿವಾದಿಯ ಪ್ರತಿವಾದ ಪತ್ರದ ಅನುಸೂಚಿ ಬಿ ರಲ್ಲಿನ ಆಸ್ತಿಗಳ ವಿವರಗಳನ್ನು ಓದಿ ಹೇಳಿ ಅವುಗಳ ಮೇಲೆ ನಿಮ್ಮ ತಾಯಿ, 2 ನೇ ಪ್ರತಿವಾದಿ ಹಾಗೂ ಸಿದ್ದಮ್ಮ ರವರಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸಾಕ್ಷಿಯು ಅವುಗಳು ನನ್ನ ತಾತ ಯಲ್ಲಪ್ಪನಿಗೆ ಸೇರಿದ ಆಸ್ತಿಗಳಾಗಿರುತ್ತವೆ ಎಂದು ನುಡಿಯುತ್ತಾರೆ. ನನ್ನ ತಾತ ಯಲ್ಲಪ್ಪ ಸದರಿ ಆಸ್ತಿಗಳ ಮಾಲಿಕ ಹಾಗೂ ಸ್ವಾಧೀನದಾರ ಆಗಿರಲಿಲ್ಲ ಎಂದರೆ ಸರಿಯಲ್ಲ. ಸದರಿ ನನ್ನ ತಾತನಿಗೆ ಸದರಿ ಆಸ್ತಿಗಳ ಮೇಲೆ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಹಾಗೂ 2 ನೇ ಪ್ರತಿವಾದಿ ಭೀಮವ್ವ ರವರು ಯಲ್ಲಪ್ಪನ 2 ನೇ ಹೆಂಡತಿ ಸಾಬವ್ವನ ಮಕ್ಕಳಾಗಿರುತ್ತಾರೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಈ ದಾವೆಯನ್ನು ಕಣೆಕಲ್ ಗ್ರಾಮದ ಮಹಾದೇವ ರವರು ನನ್ನ ಮೂಲಕ ದಾಖಲು ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಮತ್ತು 2 ನೇ ಪ್ರತಿವಾದಿ ಸೇರಿ ಈ ದಾವೆ ದಾಖಲಿಸಿರುತ್ತೇವೆ ಎಂದರೆ ಸರಿ. ನಮಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲದಿದ್ದರೂ ಸುಳ್ಳು ದಾವೆ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನಾನು, ನನ್ನ ತಾಯಿ ಅಥವಾ 2 ನೇ ಪ್ರತಿವಾದಿ ದಾವಾ ಅಸ್ತಿಯ ಮಾಲಿಕರು ಅಥವಾ ಕಬ್ಜೆದಾರರು ಆಗಿರುವುದಿಲ್ಲ ಹಾಗೂ ನಮಗೆ ಅವುಗಳಲ್ಲಿ ಹಕ್ಕು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಸಿದ್ದಮ್ಮನಿಗೆ ದಾವಾ ಆಸ್ತಿಯ ಮೇಲೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿ.

(ಈ ಮೇಲಿನ ಪಾಟೀ ಸವಾಲನ್ನು ಪ್ರತಿವಾದಿ 1(ಸಿ) ರಿಂದ 1(ಎಫ್) ರವರ ಪರವಾಗಿ ಅಳವಡಿಸಿಕೊಳ್ಳುವಂತೆ ಕೋರಿಕೊಂಡಿದ್ದು ಕೋರಿಕೆಯನ್ನು ಮನ್ನಿಸಲಾಗಿರುತ್ತದೆ.)

ಪಾಟೀ ಸವಾಲುಃ **2** ನೇ ಪ್ರತಿವಾದಿಯ ಪರವಾಗಿ ಶ್ರೀ ಎಸ್.ಎಸ್.ಕೆ ವಕೀಲರಿಂದಃ

5. ನನ್ನ ತಾತ ಯಲ್ಲಪ್ಪನ ತಂದೆಯ ಹೆಸರು ಜಂಬಣ್ಣ ಎಂದು ಇರುತ್ತದೆ. 1 ಹಾಗೂ 2 ನೇ ಪ್ರತಿವಾದಿ ಮತ್ತು ಮರಿಲಿಂಗಮ್ಮ ರವರು ಸದರಿ ಯಲ್ಲಪ್ಪ ರವರು

ಮಕ್ಕಳಾಗಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಗಳು ನನ್ನ ತಾತನ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ನಾವು ಮೂವರಿಗೆ ಸಮಪಾಲು ಬರುತ್ತದೆ ಎಂದರೆ ಸರಿ.

ಮರು ವಿಚಾರಣೆಃ ಇರುವುದಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ